(ಇಂದು ದಿನಾಂಕ 21-06-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಡಿ.ಎಸ್.ಬಿ. ವಕೀಲರಿಂದ–**

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಅಳವಳ್ಳಿ ಗ್ರಾಮದ ಸ.ನಂ. 95/1 ನೇದರ 2012-13 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿ.ಪಿ. 1 ಎಂದು, ಅಳವಳ್ಳಿ ಗ್ರಾಮದ ಸ.ನಂ. 95/19 ನೇದರ 2018-19 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿ.ಪಿ. 2 ಎಂದು, ಅಳವಳ್ಳಿ ಗ್ರಾಮದ ಸ.ನಂ. 95/1 ನೇದರ 2018-19 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿ.ಪಿ. 3 ಎಂದು, ಅಳವಳ್ಳಿ ಗ್ರಾಮದ ಸ.ನಂ. 95/19 ನೇದರ ಸರ್ವೇ ನಕಾಶೆಯನ್ನು ನಿ.ಪಿ. 4 ಎಂದು, ಮ್ಯುಟೇಶನ್ ಎಂಟ್ರಿ ನಂ. 883 ಮತ್ತು 920 ರ ದೃಢೀಕೃತ ಪ್ರತಿಯನ್ನು ನಿ.ಪಿ. 5 ಎಂದು, ದಿಃ 28-05-1984 ರ ಕಂದಾಯ ನಿರೀಕ್ಷಕ ಅಳವಳ್ಳಿ ಇವರಿಗೆ ನೀಡಿರುವ ಪತ್ರಿಕೆಯ ದೃಢೀಕೃತ ಪ್ರತಿಯನ್ನು ನಿ.ಪಿ. 6 ಎಂದು, ಮ್ಯುಟೇಶನ್ ಎಂಟ್ರಿ ನಂ. 931 ರ ದೃಢೀಕೃತ ಪ್ರತಿಯನ್ನು ನಿ.ಪಿ.

7 ಎಂದು, ಎಂ. ಆರ್ ನಂ. ಟಿ-12/16-17 ರ ದೃಢೀಕೃತ ಪ್ರತಿಯನ್ನು ನಿ.ಪಿ. 8 ಎಂದು, ದಾವಾ ಸ್ವತ್ತಿಗೆ ಸಂಬಂಧಪಟ್ಟ 6 ಫೋಟೋಗಳನ್ನು ಮತ್ತು ಸಿ.ಡಿ ಯನ್ನು ಗುರುತಿಸಲು ಪ್ರತಿವಾದಿಗಳ ಪರ ವಕೀಲರು ತಕರಾರು ಸಲ್ಲಿಸಿದ್ದು ತಕರಾರಿಗೆ ಒಳಪಟ್ಟು ಫೋಟೋಗಳನ್ನು ಕ್ರಮವಾಗಿ ನಿ.ಪಿ. 9 ರಿಂದ 14 ಎಂದು, ಮತ್ತು ಸದರಿ ಫೋಟೋಗಳಿಗೆ ಸಂಬಂಧಪಟ್ಟ ಸಿ.ಡಿ. ಯನ್ನು ನಿ.ಪಿ. 15 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ